ನಮಸ್ಕಾರ,

ನಿಮ್ಮೆಲ್ಲರಿಗೂ ತಿಳಿದಿರುವಂತೆ ನಾನು, ಕೇಶವ ಪ್ರಸಾದ್, ಮಲ್ಲಿಗೆ ಕನ್ನಡ ಸಂಘದ ನೂತನ ಅಧ್ಯಕ್ಷ. ಸತತವಾಗಿ ೧೫ ವರ್ಷಗಳ ಕಾಲ ಶ್ರಮಿಸಿದ ಮಲ್ಲಿಗೆ ಕನ್ನಡ ಸಂಘದ ಎಲ್ಲ ಕಾರ್ಯಕರ್ತರಿಗೂ ನನ್ನ ಅನಂತ ನಮಸ್ಕಾರಗಳು. ಅಂತೆಯೇ, ಉತ್ತರ ಟೆಕ್ಸಾಸ್ನಲ್ಲಿ ಇರುವ ಎಲ್ಲ ಕನ್ನಡಿಗರಿಗೂ ಮತ್ತು ಸದಸ್ಯರಿಗು ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಪ್ರಾಮಾಣಿಕವಾಗಿ ಹೇಳುವುದಾದರೆ, ಮುಂದಿನ ಎರಡು ವರ್ಷಗಳ ಕಾಲ ನಿಮ್ಮೆಲ್ಲರ ಸಂತೋಷ, ಒಗ್ಗಟ್ಟು, ಸಂಘದ ಯಶಸ್ಸು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಗಳನ್ನು ನೀಡುವುದೇ ನಮ್ಮ ತಂಡದ ಉದ್ದೇಶ. ನಮ್ಮ ಈ ಗುರಿಗೆ ನಿಮ್ಮ ಪ್ರೀತಿ, ಸಹಕಾರ ಹಾಗು ಸಹಾಯ ಅತ್ಯಗತ್ಯ. ನಮ್ಮ ಮುಂದಿನ ಯೋಜನೆಗಳ ಕಿರು ಪರಿಚಯ ಇಲ್ಲಿದೆ:

ಸಂಘವನ್ನು ಮತ್ತಷ್ಟು ಬಲಶಾಲಿಗೊಳಿಸುವ ಪ್ರಯತ್ನ - ಹೆಚ್ಚು ಸದಸ್ಯತ್ವ ನೋಂದಣಿ. ಇದರಿಂದ ಸಂಗ್ರಹವಾಗುವ ಮೊತ್ತವನ್ನು ವೈವಿಧ್ಯಮಯ, ಸದಭಿರುಚಿಯಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಲು ಉಪಯೋಗಿಸುತ್ತೇವೆ. ಪ್ರತಿಯೊಬ್ಬರೂ, ಒಂದು ಹೊಸ ಕುಟುಂಬವನ್ನು ನಮ್ಮ ಸಂಘಕ್ಕೆ ಸೇರಿಸಲು ಕೇಳಿಕೊಳ್ಳುತ್ತೇನೆ. ಇದು ನಿಮ್ಮ TASK. :)

ಉತ್ತರ ಟೆಕ್ಸಾಸ್ ನಲ್ಲಿ ಇರುವ ಪ್ರತಿಭಾವಂತರಿಗೆ ಅವಕಾಶ ಕಲ್ಪಿಸಿವುದು. ಅವರಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು ನಮ್ಮೆಲ್ಲರ ಜವಾಬ್ದಾರಿ. ಇಲ್ಲಿ ಬೆಳೆಯುತ್ತಿರುವ ಮಕ್ಕಳು, ಅಂದರೆ ನಮ್ಮ ಮುಂದಿನ ಪೀಳಿಗೆಗೆ ನಮ್ಮ ಸಂಘದ ಮೂಲಕ ಭಾಷೆ, ಸಂಸ್ಕೃತಿ ಮತ್ತು ಸಂಪ್ರದಾಯವನ್ನು ತಿಳಿ ಹೇಳುವುದು ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ, ನಮ್ಮ ತಂಡವು, DFW area ದಲ್ಲಿ ಇರುವ ಎಲ್ಲ ಕನ್ನಡ ಶಾಲೆಗಳ ಕೈ ಜೋಡಿಸಿ ಒಂದು ಸಮಗ್ರಪಠ್ಯಕ್ರಮವನ್ನು ಹೊರತರುವ ಉದ್ದೇಶವನ್ನು ಹೊಂದಿದೆ. ಶಾಲೆಯ ಮಕ್ಕಳಿಗೆ ನಮ್ಮ ಸಂಘದ ಕಾರ್ಯಕ್ರಮಗಳಲ್ಲಿ, ಭಾಗವಹಿಸಲು ಪ್ರಾಮುಖ್ಯತೆಯನ್ನು ಕೊಡುವ ಹಂಬಲ.

ಉತ್ತರ ಟೆಕ್ಸಾಸ್ನಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನೆರವಾಗುವುದು - ಮಲ್ಲಿಗೆ ಸಂಘದ ನೇತೃತ್ವದಲ್ಲಿ ನಡೆಯಲು ನಿಮ್ಮ ಸಹಕಾರ ಕೋರುತ್ತೇನೆ. ಯಾವುದೇ ಕಾರ್ಯಕ್ರಮ ನಡೆಸುವ ಯೋಜನೆ ಇದ್ದಲ್ಲಿ, ನಮ್ಮ ತಂಡವನ್ನು ಸಂಪರ್ಕಿಸಿ. ನಾವು ನಿಮ್ಮ ಪ್ರಯತ್ನಕ್ಕೆ ಸಹಕರಿಸುತ್ತೇವೆ. ಎಲ್ಲರು ಒಗ್ಗಟ್ಟಾಗಿ ಕೆಲಸ ಮಾಡಿದರೆ, ಯಶಸ್ಸು ಖಂಡಿತ, ಪಟ್ಟ ಶ್ರಮಕ್ಕೆ ಹೆಚ್ಚು ಸಾರ್ಥಕತೆ ದೊರಕುವುದು.

ಕನ್ನಡ ಸಾಹಿತ್ಯಕ್ಕೆ ಸಂಬಂಧ ಪಡುವ ಕಾರ್ಯಕ್ರಮ ಮತ್ತು ಚರ್ಚೆಗಳನ್ನು ನೀಡುವುದು. ಕನ್ನಡ ಭಾಷೆಯನ್ನು ಓದಿ, ಬರೆಯುವ ಹವ್ಯಾಸವನ್ನು ಸದಸ್ಯರಲ್ಲಿ ಬೆಳೆಸುವ ಕಿರುಪ್ರಯತ್ನ. ಸಂಘದ ಯುಗಾದಿ, ರಾಜ್ಯೋತ್ಸವ, ದೀಪಾವಳಿ ಇನ್ನಿತರ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಒಂದು ಸಾಹಿತ್ಯ ಕಾರ್ಯಕ್ರಮವನ್ನು ಹೊರತರುವುದು ಮತ್ತು ಸಾಹಿತಿಗಳು ಹಾಗು ಬರಹಗಾರರನ್ನು ಪರಿಚಯಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ನಮ್ಮ ಸಂಘವು ಕೇವಲ ಕಾರ್ಯಕ್ರಮಗಳಿಗೆ ಸೀಮಿತವಾಗಬಾರದು. ಇದರ ಜೊತೆಗೆ ಸಂಘವು Non Profit ಸಂಸ್ಥೆಗಳ ಸದುದ್ದೇಶಗಳಿಗೆ ನೆರವಾಗುವುದು. ಈ ನಿಟ್ಟಿನಲ್ಲಿ, MKANT, ಈ ವರ್ಷ, ಮಕ್ಕಳ ಪ್ರಾಣಕ್ಕೆ ಹಾನಿಕರವಾದಂತಹ ಅಸ್ವಸ್ಥತೆಗಳ ಸಂಶೋಧನೆ

ಮತ್ತು ಚಿಕಿತ್ಸೆಗೆ ಪ್ರೋತ್ಸಾಹ ನೀಡುವ ಹಾದಿಯಲ್ಲಿ ನಡೆಯುತ್ತಿರುವ MITHIL ಫೌಂಡೇ ನ್‌ಅನ್ನು ಆಯ್ಕೆ ಮಾಡಿ, ಅದರ ಏಳಿಗೆಗಾಗಿ ಸಹಾಯ ಮಾಡುವ ಧ್ಯೇಯ ಹೊಂದಿದೆ. ಈ ಒಳ್ಳೆಯ ಕೆಲಸದಲ್ಲಿ ನೀವೆಲ್ಲರೂ ಭಾಗಿಯಾಗಲು ಕೇಳಿಕೊಳ್ಳುತ್ತೇನೆ.

ನಿಮ್ಮೆಲ್ಲರೊಂದಿಗೆ ಒಂದಾಗಿ ಮಲ್ಲಿಗೆ ಸಂಘಕ್ಕೆ ಸೇವೆ ಸಲ್ಲಿಸುವ ಮಹದಾಕಾಂಕ್ಷೆಯನ್ನು ಹೊತ್ತಿದ್ದೇವೆ. ಇದಕ್ಕೆ ನಿಮ್ಮ ಸಹಾಯ ಸಹಾಕಾರವನ್ನು ಆಶಿಸುತ್ತೇನೆ.

ಇಂತಿ ನಿಮ್ಮ,

ಕೇಶವ ಪ್ರಸಾದ್.